ಮಲ್ಲೇಶ ಕೆ. ಕೊಡಸೋಗೆ
*ಭಾರತೀಯರು ಬೇರೆ ಸಂಖ್ಯೆಗಳನ್ನು ಬಿಟ್ಟು '0' ಯನ್ನೇ ಏಕೆ ಕಂಡುಹಿಡಿದರು?*



ಒಂದು ಮಾರ್ಕ್ ಸಹ ಗಳಿಸದ ಶಿಷ್ಯನಿಗೆ ಋಷಿ ಅವನ ಬೋಡು ತಲೆಯ ಚಿತ್ರವನ್ನೇ ಬರೆದುಕೊಟ್ಟರಂತೆ. ಅದೇ ಮುಂದೆ ಶೂನ್ಯ, 0 ಎಂದು ಖ್ಯಾತವಾಯಿತಂತೆ!

ಪಿ.ಜಿ.ರಾಘವೇಂದ್ರ, ಮೈಸೂರು
*ಗಾಂಧೀಜಿಗೆ ಗೋಡ್ಸೆ ಗುಂಡಿಕ್ಕುವಾಗ ಮಹಾತ್ಮರು ನಿಮ್ಮ ಹೆಸರನ್ನೇಕೆ ಉಚ್ಚರಿಸಿದರು ರಾಮ್?*
ತಾತ ಹೊರಟಾಗ ಅವರಿಗೆ ಪ್ರಿಯನಾದ ಮೊಮ್ಮಗನನ್ನು ಕರೆಯುವುದು ಸಹಜ!

ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ
*ಈಗಿನ ಕಾಲದಲ್ಲಿ ಸತ್ಯಕ್ಕಿಂತ ಸುಳ್ಳಿಗೇ ಜಾಸ್ತಿ ಬೆಲೆ ಬರುತ್ತಿರುವುದೇಕೆ?*
ನಿತ್ಯಸಾಕ್ಷಿಗಳು, ವಕೀಲರು ತಮ್ಮ ಫೀಸ್ ಏರಿಸಿರುವುದರಿಂದ!

ಗೀತಾ ಬರ್ಲ, ಬೆಂಗಳೂರು
*ಅವಿವಾಹಿತರಿಗಿಂತಲೂ ವಿವಾಹಿತರಿಗೇ ಪ್ರೀತಿಯ ಹುಚ್ಚು ಜಾಸ್ತಿಯಂತೆ, ಹೌದೇ?*



ಕಾಡುಪ್ರಾಣಿಗಳೇ ಹಾಗೆ; ರಕ್ತದ ರುಚಿ ಕಂಡ ನಂತರ ಬೇಟೆಯ ತವಕ ಹೆಚ್ಚು!

ಮಾಲತಿರಾಜು, ಬೆಂಗಳೂರು
*ಪ್ರತಿಕೃತಿ ದಹನದ ಔಚಿತ್ಯವೇನು?*
ಕಾಮನಹಬ್ಬಕ್ಕೆ ಒಂದು ರಿಹರ್ಸಲ್!

ಬಸವಣ್ಣ ಹೊನಖಾಂಡೆ, ಅಥಣಿ
*ಕಾನೂನನ್ನು ಕತ್ತೆಗೆ ಹೋಲಿಸುತ್ತಾರಲ್ಲಾ...?*
ಸರಿಯೇ; ಅಪರಾಧಿಗಳ ಮತ್ತು ರೌಡಿಗಳ ಮಲಿನತೆಯ ಹೊರೆ ಹೊರುತ್ತದಲ್ಲಾ...!

ಎಂ.ಎನ್.ಸೋಮಶೇಖರ್, ಮೈಸೂರು
*ಭಗವಂತನು ಸ್ತ್ರೀಗಿಂತ ಮೊದಲು ಪುರುಷನನ್ನೇಕೆ ಸೃಷ್ಟಿಸಿದನು?*
ಯಾವುದೇ ಸೃಷ್ಟಿಯಾದರೂ ರೀತಿ ಒಂದೇ; ಮೊದಲು ಬೇಸ್ ಮಾಡೆಲ್, ನಂತರ ಇಂಪ್ರೂವ್ಡ್ ವರ್ಷನ್!

ಎ.ಕೆ.ಪಟ್ಟಾಭಿ, ಬೆಂಗಳೂರು
*ದೇವಸ್ಥಾನಗಳು ಗಲ್ಲಿಗಲ್ಲಿಗಳಲ್ಲೂ ಹೆಚ್ಚುತ್ತಿರುವುದಲ್ಲಾ, ಪಾಪ ಮಾಡುವವರ ಸಂಖ್ಯೆ ಹೆಚ್ಚುತ್ತಿದೆಯೇನು?*
ಎಲ್ಲಾ ಭಯೋತ್ಪಾದಕ ಬ್ರಹ್ಮಾಂಡಿಗಳ ಪ್ರಚಾರಫಲ. ಕಮಿಷನ್ ಸಿಕ್ಕರೆ ಅವರು ದೇವರನ್ನೂ ಮಾರಿಬಿಡುತ್ತಾರೆ!

ಶಿವರಾಜ ಕೆ. ವಿಭೂತಿ, ಹರಿಹರ
*ಇಲ್ಲೊಬ್ಬ ಅವಿವೇಕಿಗೆ ವಿವೇಕ ಎಂಬ ಹೆಸರಿನಿಂದ ಕರೆಯುವುದು ಎಷ್ಟು ಸರಿ?*
ವಿಭೂತಿ ಎಂದು ಕರೆದ ಮಾತ್ರಕ್ಕೆ ನಿಮ್ಮನ್ನು ಪೊಟ್ಟಣದಲ್ಲಿ ಕಟ್ಟಿಕೊಡಲು ಅಥವಾ ಹಣೆಯಲ್ಲಿ ಧರಿಸಲು ಆದೀತೆ? ಹೆಸರೇ ಬೇರೆ, ವ್ಯಕ್ತಿತ್ವವೇ ಬೇರೆ!

ಜಗದೀಶ ಎಂ.ಎನ್. ನಗರ
*ರಾಜಕೀಯ ಮತ್ತು ಸಿನಿಮಾ ರಂಗಗಳಲ್ಲಿ ನಿಮ್ಮ ಆಯ್ಕೆ?*
ಖಂಡಿತವಾಗಿಯೂ ಸಿನಿಮಾ ರಂಗವೇ–ಪ್ರೇಕ್ಷಕನಾಗಿ!

ಎಂ.ವಿ. ವೆಂಕಮ್ಮ, ಬಳ್ಳಾರಿ
*ರಾಜಕೀಯ ಎಂಬ ಪುಸ್ತಕಕ್ಕೆ ಬೆಲೆ ಇರುವುದು ಮುಖಪುಟಕ್ಕೋ, ಕೊನೆಯ ಪುಟಕ್ಕೋ?*
ಎರಡಕ್ಕೂ ಅಲ್ಲ; ಬದಲಾಗುವ ಅಥವಾ ವಿಸ್ತರಿಸಲಾಗುವ ಸಂ–ಪುಟಕ್ಕೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಗಡಿಯಾರಕ್ಕೂ, ಮನುಷ್ಯನ ಜೀವನಕ್ಕೂ ಏನು ವ್ಯತ್ಯಾಸ?*
ಗಡಿಯಾರಕ್ಕೆ ಬಾಸ್ ಇಲ್ಲ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಹರೆಯ ಬಂದಾಗ ಪ್ರೀತಿಸಲೇಬೇಕಾ? ಪ್ರೀತಿಸದಿದ್ದರೆ ಏನಾಗುತ್ತೆ?*
ಕಡ್ಡಾಯವೇನಿಲ್ಲ; ಪ್ರೀತಿಸದಿದ್ದರೆ ಮೇಕಪ್, ಹೋಟೆಲ್ ಖರ್ಚು ಉಳಿಯುತ್ತದೆ!

## ಬಹುಮಾನಿತ ಪ್ರಶ್ನೆ

ಮಹಾವೀರ ಕಾಸರ, ಶಿವಮೊಗ್ಗ
*ನನಗಿಂತ ಜಾಣರಿಲ್ಲ ಎಂದು ಹೇಳುವವರಿಗೆ ನಿಮ್ಮ ಸಲಹೆ ಏನು?*
ಚೆನ್ನಾಗಿ ಸುತ್ತಾಡಿ; ಲೋಕ ತಿರುಗಿದರೆ ಲೋಪ ತಿಳಿದೀತು!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಗಂಡು ತನಗಿಂತ ಸ್ವಲ್ಪ ಹೆಚ್ಚು ವಯಸ್ಸಿನ ಹೆಣ್ಣನ್ನು ಮದುವೆ ಆದರೆ ಏನಾಗುತ್ತದೆ?*
ಗಂಡಿಗೆ ಎರಡನೇ ಮದುವೆಯ ಆಸೆ, ಸಾಧ್ಯತೆ ಹೆಚ್ಚುತ್ತದೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು
*ಮನಸ್ಸಿಗೆ ಬಿದ್ದ ಪೆಟ್ಟನ್ನು ಶಮನ ಮಾಡಲು ಏನು ಮಾಡಬೇಕು?*
ಮನಸ್ಸು ಮಾಡಬೇಕು!

ಬಿ.ಎಸ್. ನಾರಾಯಣಸ್ವಾಮಿ, ಬೋಧನಹೊಸಹಳ್ಳಿ
*ನನ್ನ ಪ್ರೇಯಸಿ ನನ್ನೊಂದಿಗೂ ನಗುತ್ತಾಳೆ, ನನ್ನ ಸ್ನೇಹಿತನೊಂದಿಗೂ ನಗುತ್ತಾಳೆ. ಹೀಗಿರುವಾಗ ನಾನು ಅವಳನ್ನು ನಂಬುವುದಾದರೂ ಹೇಗೆ?*



ಅವರಿಬ್ಬರೇ ನಗುನಗುತ್ತಾ ಕೈಹಿಡಿಯಲಿ ಬಿಡಿ; ಅನುಮಾನದ ರೋಗ ಇರುವವರು ಮದುವೆ ಆಗಬಾರದು.

ಹಾಡ್ಯ ಜಯಾನಂದ, ಮೈಸೂರು
*ವರನನ್ನು ಮಾತ್ರ ಕುದುರೆ ಮೇಲೆ ಅಥವಾ ಸಾರೋಟಿನಲ್ಲಿ ಕರೆತರುತ್ತಾರಲ್ಲಾ, ಯಾಕೆ?*
ವಧುವನ್ನೂ ಕೂಡಿಸಿಬಿಟ್ಟರೆ ಹಾಗೇ ಹನಿಮೂನ್‌ಗೆ ಹೋಗಿಬಿಡುವರೆಂದು!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ಗುರು! ಅಂದು ಸತ್ಯ ಶಿವಂ ಸುಂದರಂ, ಇಂದು ಕಳ್ಳ ಮಳ್ಳ ಸುಳ್ಳ, ಮುಂದೆ...?*
ವಂಚಕ ಕೀಚಕ ಲಂಚಕ!

ರಾಮ್